(ದಿಃ 27.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.)

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಆರ್ ಜಿ ಕೆ ವಕೀಲರಿಂದ.</u>**

13. ಹುಬ್ಬಳ್ಳಿಯಲ್ಲಿರುವ ಪ್ರೆಸಿಡೆಂಟ ಹೊಟೇಲು ಇದು ಸಮೂಹ ಸಂಸ್ಥೆಯಾಗಿದ್ದು ಪೈ ಗ್ರೂಪ್ ಆಫ್ ಹೊಟೇಲ್ಸ ನವರ ಮಾಲೀಕತ್ವದ್ದಾಗಿರುತ್ತದೆ. ಸದರಿ ಮಾಲಿಕತ್ವದ ಹೊಟೇಲುಗಳು ಬೆಂಗಳೂರು ಮತ್ತು ಮೈಸೂರಿನಲ್ಲಿ ಇದೆ ಎಂದರೆ ಸರಿ. ಮಾಲಿಕರ ಹೆಸರು ಜಗನ್ನಾಥ ಪೈ ಆಗಿದೆ. ನಾನು ಮೂಲತಃ ಬ್ಯಾಡಗಿ ಪಟ್ಟಣದವನಾಗಿದ್ದೇನೆ. ನಾನು ಹೊಟೇಲಿನಲ್ಲಿ ಕೆಲಸವನ್ನು ಅರ್ಜಿ ನೀಡಿ ಪಡೆದುಕೊಂಡಿದ್ದೇನೆ. ಯಾವುದೇ ಜಾಹೀರಾತನ್ನು ಹೊಟೇಲಿನವರು ನೀಡಿರಲಿಲ್ಲ. ಆದರೆ ನನ್ನ ಗೆಳೆಯನ ಮೂಲಕ ಅರ್ಜಿ ಸಲ್ಲಿಸಿ ಕೆಲಸಕ್ಕೆ ಸೇರಿದ್ದೆನೆ. ನಾನು ಅರ್ಜಿಯನ್ನು 2019 ರಲ್ಲಿ ಕೊಟ್ಟಿರುತ್ತೇನೆ. ನನಗೆ ನೇಮಕಾತಿ ಆದೇಶವನ್ನು 2019 ನವೆಂಬರ್ ತಿಂಗಳಿನಲ್ಲಿ ಕೊಟ್ಟಿರುತ್ತಾರೆ. ನೇಮಕಾತಿ ಆದೇಶ ನೀಡಿದ ನಾನು ಮೂರು ದಿನಗಳ ನಂತರ ನಾನು ಕೆಲಸಕ್ಕೆ ಸೇರಿದೆನು. ನಾನು ಪೋಲಿಸರಿಗೆ ಹೇಳಿಕೆ ನೀಡುವಾಗ ನೇಮಕಾತಿ ಆದೇಶದ ಪ್ರತಿಯನ್ನು ಕೊಟ್ಟಿರುವುದಿಲ್ಲ.

14. ಹೊಟೇಲಿನಲ್ಲಿ ಹಾಜರಾತಿ ರೆಜಿಸ್ಟರನ್ನು ನಿರ್ವಹಿಸುತ್ತಾರೆ. ನನ್ನನ್ನು ಹೊಟೇಲಿನ Front office Associate ಎಂದು ನೇಮಕ ಮಾಡಿಕೊಂಡಿರುತ್ತಾರೆ. ನೇಮಕಾತಿ ಆದೇಶದಲ್ಲಿ ನನ್ನ ಕೆಲಸದ ಬಗ್ಗೆ ನಿಯಮ ಮತ್ತು ನಿಬಂದನೆಗಳನ್ನು ಹೇಳಿದ್ದರು. ನಾನು ಪ್ರೆಸಿಡೆಂಟ್ ಹೊಟೇಲನ ನೌಕರ ಎಂದು ಯಾವುದೇ ದಾಖಲೆಗಳನ್ನು ಪೋಲಿಸರಿಗೆ ನೀಡಿರುವುದಿಲ್ಲ. ಹೊಟೇಲಿನಲ್ಲಿ ಕೆಲಸ ಮಾಡುವ ನೌಕರರು / ಸಿಬ್ಬಂದಿಗಳು ಯಾವ ಯಾವ ಸ್ಥಳದಲ್ಲಿ ಕೆಲಸ ನಿರ್ವಹಿಸಬೇಕು ಎಂದು ಹೊಟೇಲಿನವರು Official Order ಮಾಡುತ್ತಾರೆ ಎಂದರೆ ಸರಿ. ಸದರಿ Official order ನ್ನು Online ನಲ್ಲಿ ನೀಡುತ್ತಾರೆ.

15. ಹೊಟೇಲಿನಲ್ಲಿ ನೌಕರರು ಹಾಜರಾಗುವ ಸಂಬಂಧ Bio-metric ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಸದರಿ Bio-metric ನಲ್ಲಿ Face reading ವ್ಯವಸ್ಥೆ ಇರುತ್ತದೆ ಎಂದರೆ ಆ ಸಮಯದಲ್ಲಿ ಇರಲಿಲ್ಲ. ಆ ದಿನ ನಾನು ಕೆಲಸಕ್ಕೆ ಹಾಜರಾದ ಬಗ್ಗೆ ನನ್ನ ಹೆಬ್ಬೆಟ್ಟು ಗುರುತನ್ನು ಹಾಕಿದ್ದೇನೆ. ಸದರಿ ಹಾಜರಾತಿ ಬಗ್ಗೆ ಯಾವುದೇ ದಾಖಲೆಯನ್ನು ನಾನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ನಾನು ಪ್ರೆಸಿಡೆಂಟ್ ಹೊಟೇಲಿನಲ್ಲಿ ಕೆಲಸಗಾರನಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ನವೆಂಬರ್ 2022 ನೇ ಸಾಲಿನಲ್ಲಿ ಪ್ರೆಸಿಡೆಂಟ್ ಹೊಟೆಲಿನಲ್ಲಿ ಕೆಲಸ ಬಿಟ್ಟಿದ್ದೇನೆ.

16. ಹೊಟೇಲಿನ Front Office ನಲ್ಲಿ ದೊಡ್ಡ ಹಾಲ್ ಇದ್ದು ಅಲ್ಲಿ ಸೋಫಾ ಸೆಟ್ಟುಗಳು ಮತ್ತು ಕುರ್ಚಿಗಳು ಇರುತ್ತವೆ ಎಂದರೆ ಸರಿ. ಸದರಿ ಹೊಟೇಲು ಹುಬ್ಬಳ್ಳಿ ಧಾರವಾಡ ಮುಖ್ಯ ರಸ್ತೆಯಲ್ಲಿ

ಇದೆ ಎಂದರೆ ಸರಿ. ಹೊಟೇಲಿನ ಮುಂಭಾಗದಲ್ಲಿ ಮುಖ್ಯರಸ್ತೆ ಇದ್ದು ಆ ರಸ್ತೆಯು ಗೋಪನಕೊಪ್ಪ, ಉಣಕಲ್ ಮತ್ತು ಸಾಯಿನಗರಕ್ಕೆ ಸಂಕಲ್ಪ ಕಲ್ಪಿಸುತ್ತವೆ ಎಂದರೆ ಸರಿ. ಪ್ರೆಸಿಡೆಂಟ್ ಹೊಟೇಲು 4 ಮಹಡಿಯನ್ನು ಹೊಂದಿದೆ. ಅಂದರೆ Ground Floor, Meznine floor, First floor, Second floor, Third floor and Fourth floor ಇದೆ. 4 ನೇ ಮಹಡಿಯಲ್ಲಿ ಒಂದು Bar and Restaurant ಇದೆ. ಹೊಟೇಲಿನ ಮುಂಭಾಗದ ಜಾಗದಲ್ಲಿ ತೆರೆದ ಸ್ಥಳವಿದ್ದು ಅಲ್ಲಿ ವಾಹನಗಳನ್ನು ಪಾರ್ಕ ಮಾಡುತ್ತಾರೆ ಎಂದರೆ ಸರಿ.

17. ಹೊಟೆಲಿಗೆ ಬೆಳಗಿನಿಂದ ಗ್ರಾಹಕರು ಬರಲು ಪ್ರಾರಂಭಿಸುತ್ತಾರೆ ಎಂದರೆ ಸರಿ. Ground Floor ನಲ್ಲಿ ಹೊಟೇಲಿನ ರೂಮ್ಸಗಳು ಇವೆ ಎಂದರೆ ಕೇವಲ ಲಾಬಿ ಮಾತ್ರ ಇದೆ. ಲಾಬಿಯ ಬಲಗಡೆ ಆಂಧ್ರಾ ರುಚೀಲು ಎಂಬ ರೆಸ್ಟೊರೆಂಟ್ ಇದೆ. ಆಂಧ್ರಾ ರುಚೀಲು ಹೊಟೇಲಗೆ ಹೋಗಲು ಲಾಬಿಯ ಮುಂಭಾಗದಲ್ಲಿರುವ ಮುಖ್ಯದ್ವಾರದಿಂದ ಹೋಗಬೇಕು ಎಂದರೆ ಸರಿ. ಆಂಧ್ರಾ ರುಚೀಲು ಹೊಟೇಲು ಇದು ಮಧ್ಯಾಹ್ನ 12-00 ಗಂಟೆಗೆ ಶುರುವಾಗುತ್ತದೆ. ಆಂಧ್ರಾ ರುಚೀಲು ಹೊಟೇಲ ಇದು ಖ್ಯಾತಿ ಹೊಂದಿರುವ ಹೊಟೇಲು ಎಂದರೆ ಸರಿ. ಆ ರೀತಿ ಖ್ಯಾತಿ ಹೊಂದಿರುವ ಕಾರಣ ಬಹಳ ಜನರು ಆ ಹೊಟೇಲಿಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿ. ಲಾಬಿಯಲ್ಲಿ ಹೊಟೇಲಿನ ಮೇಲಿನ ಅಂತಸ್ತುಗಳಿಗೆ ಹೋಗಲು ಲಿಫ್ಟುಗಳ ವ್ಯವಸ್ಥೆ ಇದೆ ಎಂದರೆ ಸರಿ. ಆಂಧ್ರಾ ರುಚೀಲು ಹೊಟೇಲಿನಲ್ಲಿ ನಮ್ಮ ಹೊಟೇಲಿನ ಸಿಬ್ಬಂದಿಗಳು ಕೆಲಸ ಮಾಡುತ್ತಾರೆ ಎಂದರೆ ಸರಿ. ಲಾಬಿಯಿಂದ ಆಂಧ್ರಾ ರುಚೀಲು ಹೊಟೇಲಿನ ನಡುವಿನ ಅಂತರ ಸುಮಾರು 20-25 ಅಡಿ ಎಂದರೆ ಸರಿ. ಪ್ರೆಸಿಡೆಂಟ್ ಹೊಟೇಲಿನ ಮುಂಭಾಗದಲ್ಲಿ ಯಾವಾಗಲೂ ಜನ ಇರುತ್ತಾರೆ ಎಂದರೆ ಸರಿಯಲ್ಲ, ಜನ ಯಾವಾಗ ಬರುತ್ತಾರೆ ಹೋಗುತ್ತಾರೆ ಎಂದು ಹೇಳಲಾಗುವುದಿಲ್ಲ.

18. ದಿಃ 02.07.2022 ಕ್ಕೆ ಚೆಕ್ ಇನ್ ಆಗಿ ದಿಃ 04.07.2022 ಕ್ಕೆ ಚೆಕ್ ಔಟ್ ಇತ್ತು. ದಿಃ 04.07.2022 ರಂದು ಚೆಕ್ ಔಟ್ ಆಗಿದೆ ಎಂದರೆ ಚೆಕ್ ಔಟ್ ಆಗಿಲ್ಲ. ದಿಃ 04.07.2022 ರಂದು Date of departure ಎಂದು ಹೊಟೇಲಿನವರು ದಾಖಲೆ ಕೊಟ್ಟಿದ್ದಾರೆ ಎಂದರೆ ಸರಿ. ದಿಃ 04.07.2022 ರಂದು ಹೊಟೇಲಿನ ಬಿಲ್ಲನ್ನು ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಬಿಲ್ಲನ್ನು ಕೊಟ್ಟ ನಂತರ ಚಂದ್ರಶೇಖರ ಇವರು ರೂಮನ್ನು ಖಾಲಿ ಮಾಡಿದ್ದರು ಎಂದರೆ ನಾನು Departure confirmation call ಮಾಡಿದಾಗ ಅವರು ಅವಧಿಯನ್ನು ವಿಸ್ತರಿಸಿದರು. ದಿಃ 04.07.2022 ರಂದು ಚೆಕ್ ಔಟ್ ಬಿಲ್ಲು Raise ಆಗಿರಲಿಲ್ಲ. ಗುರೂಜಿ ರವರು 04.07.2022 ರ ನಂತರ ತಮ್ಮ ಅವಧಿಯನ್ನು ವಿಸ್ತರಿಸಿದ್ದರು ಎಂಬ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ಕೊಡಲಿಲ್ಲ ಎಂದರೆ ಪೋಲಿಸರು ಕೇಳಲಿಲ್ಲ ನಾನು ಕೊಡಲಿಲ್ಲ.

19. ದಿಃ 05.07.2022 ರಂದು ನಾನು ಕರ್ತವ್ಯಕ್ಕೆ ಬೆಳಿಗ್ಗೆ 7-00 ಗಂಟೆಗೆ ಹಾಜರಾದೆನು. ಹೊಟೇಲಿನಲ್ಲಿ ಕೆಲಸಗಾರರು ಪಾಳೆ(Shift)ಯಲ್ಲಿ ಕೆಲಸ ಮಾಡುತ್ತಾರೆ. ಬೆಳಿಗ್ಗೆ 7-00 ರಿಂದ ಸಂಜೆ 4-00 ರವರೆಗೆ ನನ್ನ ಕರ್ತವ್ಯದ ಅವಧಿ ಇತ್ತು. ದಿಃ 04.07.2022 ರಂದು ಗುರೂಜಿ ರವರು ಹೊಟೇಲಿಗೆ ಬೆಳಿಗ್ಗೆ 11-00 ಗಂಟೆಗೆ ರೂಮ ನಂ.220 ಯಿಂದ ಬಂದರು. ಸುಮಾರು ಒಂದುವರೆ ತಾನು ಲಾಬಿಯಲ್ಲಿ ಇದ್ದು ನಂತರ ರೂಮಿಗೆ ವಾಪಸ್ಸು ಹೋದರು. ದಿಃ 04.07.2022 ರಂದು ಗುರೂಜಿ ರವರು ರಾಮನ್ನು ಖಾಲಿ ಮಾಡಿ ಹೋಗಿದ್ದರು ಎಂದರೆ ಸರಿಯಲ್ಲ. ದಿಃ 04.07.2022 ರಂದು ಯಾರೋ ಇಬ್ಬರು ಬಂದು ಗುರುಜಿಯವರೊಂದಿಗೆ ಲಾಬಿಯಲ್ಲಿ ಒಂದುವರೆ ತಾಸು ಮಾತನಾಡಿ ಹೋದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

20. ದಿಃ 04.07.2022 ರಂದು ಗುರೂಜಿಯವರು ಹೆಂಡತಿ ಲಾಬಿಗೆ ಬಂದಿರಲಿಲ್ಲ. ದಿಃ 05.07.2022 ರಂದು ಘಟನೆ ಆಯಿತು ಎಂದು ಹೇಳಿದ ಸಮಯದಲ್ಲಿ ಗುರೂಜಿಯವರ ಹೆಂಡತಿ ಲಾಬಿಗೆ ಬಂದಿರಲಿಲ್ಲ. ದಿಃ 05.07.2022 ರಂದು ಯಾರೋ ಇಬ್ಬರು ಗುರೂಜಿಯವರ ಹತ್ತಿರ ಬಂದಿದ್ದರು, ಅವರು ಅವರಿಗೆ ಚುಚ್ಚಿ ಹೋದರು, ಆ ಇಬ್ಬರು ಆರೋಪಿಗಳು ಎಂದು ನಾನು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿವಸ ಲಾಬಿಯಲ್ಲಿ ಜಾಸ್ತಿ ಜನ ಇದ್ದರು ಎಂದರೆ ಸರಿಯಲ್ಲ. ಆದಿನ ಲಾಬಿಯಲ್ಲಿ ಒಬ್ಬರೆ ಇದ್ದರು, ಆ ಒಬ್ಬರು ಯಾರು ಎಂದು ನನಗೆ ಗೊತ್ತಿಲ್ಲ. ಆ ಒಬ್ಬರು ಹೊಟೆಲಿನ ಸಿಬ್ಬಂದಿ ಆಗಿರಲಿಲ್ಲ. ಆ ದಿನ ಆಂದ್ರ ರುಚೀಲು ಹೊಟೇಲಿಗೆ ಜಾಸ್ತಿ ಜನ ಹೋಗಿರಲಿಲ್ಲ. ಅಂದಾಜು ಎಷ್ಟು ಜನರು ಎಂದು ಹೇಳಲು ನನಗೆ ಗೊತ್ತಿಲ್ಲ. ಟಿವಿ ಮಾಧ್ಯಮದಿಂದ ಆ ಇಬ್ಬರು ವ್ಯಕ್ತಿಗಳ ಪೈಕಿ ತೆಳ್ಳಗಿದ್ದ ವ್ಯಕ್ತಿ ಮಂಜುನಾಥ ಎಂದು ಮತ್ತು ದಪ್ಪಗಿದ್ದ ವ್ಯಕ್ತಿಯ ಹೆಸರು ಮಹಾಂತೇಶ ಎಂದು ನನಗೆ ನಂತರ ಗೊತ್ತಾಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ ಮತ್ತು ಪ್ರಥಮ ಬಾರಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ.

21. ದಿಃ 08-07-2022 ರಂದು ಪೋಲಿಸರು ಮಧ್ಯಾಹ್ನ ಸುಮಾರು 3-00 ಗಂಟೆಗೆ ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ಬಂದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿ.

22. ಆ ಇಬ್ಬರು ವ್ಯಕ್ತಿಗಳು ಲಾಬಿಯಲ್ಲಿ ಬಂದು ಕುಳಿತ ಸುಮಾರು 3 ನಿಮಿಷದ ನಂತರ ಸ್ವಾಮೀಜಿಯವರು ಬಂದು ಲಾಬಿಯಲ್ಲಿದ್ದ ಮಹಾರಾಜಾ ಚೇರಿನಲ್ಲಿ ಕುಳಿತುಕೊಂಡರು, ಸ್ವಾಮೀಜಿಯವರ ಮುಂಬಾಗದಲ್ಲಿ ಆ ಇಬ್ಬರು ವ್ಯಕ್ತಿಗಳು ಕುಳಿತಿದ್ದರು, ನನಗೆ ಕಿರುಚಾಡುವ ಶಬ್ದ ಕೇಳಿ ಬಂದಿತು, ಬಂದಂತಹ ಆ ಇಬ್ಬರು ವ್ಯಕ್ತಿಗಳು ಗುರೂಜಿಗೆ ಚಾಕುವಿನಿಂದ ಚುಚ್ಚುತ್ತಿದ್ದರು,

ಗುರುಜಿಯವರು ಆಗ ಕೆಳಗೆ ಬಿದ್ದರು, ಅಪ್ಪಾ ಅವ್ವಾ ಎಂದು ಕಿರುಚಾಡುವ ಶಬ್ದ ಕೇಳಿತು, ಬಂದಂತಹ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬ ವ್ಯಕ್ತಿ ತೆಳ್ಳಗೆ ಇದ್ದು ಆ ವ್ಯಕ್ತಿ ನೀಲಿ ಬಣ್ಣದ ಶರ್ಟ ಹಾಕಿದ್ದರು, ಮತ್ತೊಬ್ಬ ವ್ಯಕ್ತಿ ದಪ್ಪ ಇದ್ದು ಲೈಟ ಪಿಂಕ ಕಲರ ಟಿ ಶರ್ಟ ಹಾಕಿದ್ದರು, ತೆಳ್ಳಗಿದ್ದ ವ್ಯಕ್ತಿ ಗುರುಜಿಯವರ ಕುತ್ತಿಗೆಯ ಮೇಲೆ ಜಾಸ್ತಿ ಅಟ್ಯಾಕ್ ಮಾಡಿದರು, ಚಾಕುವಿನಿಂದ ಅಟ್ಯಾಕ್ ಮಾಡಿದರು, ದಪ್ಪ ಇದ್ದ ವ್ಯಕ್ತಿ ಹೊಟ್ಟೆ ಮತ್ತು ಬೆನ್ನಿನ ಭಾಗಕ್ಕೆ ಅಟ್ಯಾಕ್ ಮಾಡಿದರು, ಬಂದಂತಹ ಇಬ್ಬರು ವ್ಯಕ್ತಿಗಳು ಸುಮಾರು 30-40 ಬಾರಿ ಅಟ್ಯಾಕ್ ಮಾಡಿದರು, ಗುರುಜಿಯವರನ್ನು ಬಿಡಿಸಿಕೊಳ್ಳಲು ಮ್ಯಾನೆಜರ್ ಆದ ಲೋಹಿತ(ಚಾಸಾಃ-22), ಚಾಸಾಃ 23 ಪರಮೇಶ, ಚಾಸಾಃ24 ಅಖಿಲೇಶ ಬಂದರು, ಆಗ ಆ ಇಬ್ಬರು ವ್ಯಕ್ತಿಗಳು ಚಾಸಾಃ22 ರಿಂದ 24 ರವರಿಗೆ ಚಾಕು ತೋರಿಸಿದರು, ಚಾಕು ತೋರಿಸಿದ ಕಾರಣ ನಾನು ಸಹ ಹಿಂದೆ ಸರಿದೆನು, ನಿರಂತರವಾಗಿ ಗುರುಜಿಯವರ ಮೇಲೆ ಆಕ್ರಮಣ ಮಾಡಿದರು, ಗುರುಜಿಯವರು ರಕ್ತದ ಮಡುವಿನಲ್ಲಿ ಬಿದ್ದಿದ್ದರು, ಬಂದಂತಹ ಇಬ್ಬರು ವ್ಯಕ್ತಿಗಳು ಅಲ್ಲಿಂದ ಓಡಿ ಹೋದರು, ಹೊಟೇಲಿನ ಮೇಲ್ಭಾಗದಲ್ಲಿದ್ದ ಸಿಬ್ಬಂದಿಯವರು ಬಂದು ಸೇರಿದರು, ಗುರುಜಿಯವರು ಮೃತಪಟ್ಟಿದ್ದರು, ಚಾಸಾಃ22 ರವರು ಪೋಲಿಸರಿಗೆ ಕರೆ ಮಾಡಿದರು, ಪೋಲಿಸರು ಅಲ್ಲಿಗೆ ಬಂದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

23. ನ್ಯಾಯಾಧೀಶರ ಮುಂದೆ ಹೇಳಿಕೆ ನೀಡುವಾಗ ನನ್ನ ಜೊತೆ ಪೋಲಿಸರು ಬಂದಿದ್ದರು ಎಂದರೆ ಕೊರ್ಟಿನ ಒಳಗೆ ನನ್ನನ್ನು ಮಾತ್ರ ಕರೆದಿದ್ದರು. ನನ್ನನ್ನು ಒಳಗೆ ಕರೆಯುವವರೆಗೂ ಪೋಲಿಸರು ನನ್ನ ಜೊತೆ ಇದ್ದರು ಎಂದರೆ ಸರಿ. ಆ ಸಮಯ ನಾನು ಪೋಲಿಸರೊಂದಿಗೆ ಮಾತನಾಡುತ್ತಾ ಕುಳಿತಿದ್ದೆ ಎಂದರೆ ಮಾತನಾಡುತ್ತಿರಲಿಲ್ಲ. ನನ್ನ ಜೊತೆ 4 ಜನ ಬಂದಿದ್ದರು, ನಾವೆಲ್ಲರೂ ಹೊಟೇಲಿನ ಕಾರಿನಲ್ಲಿ ನ್ಯಾಯಾಲಯಕ್ಕೆ ಬಂದಿದ್ದೆವು. ಆ ರೀತಿ ನ್ಯಾಯಾಲಯಕ್ಕೆ ಬಂದು ಹೇಳಿಕೆ ಕೊಡಬೇಕು ಎಂದು ಪೋಲಿಸರು ನೋಟಿಸು ಕೊಟ್ಟಿರಲಿಲ್ಲ, ಆದರೆ ಚಾಸಾಃ22 ರವರಿಗೆ ಮಾಹಿತಿ ನೀಡಿದ್ದರು. ಪೋಲಿಸರು ಹೇಳಿಕೊಟ್ಟ ರೀತಿಯಲ್ಲಿ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ-20 ಮತ್ತು 21 ನ್ನು ಪೋಲಿಸರು ನನಗೆ ತೋರಿಸಿರಲಿಲ್ಲ.

24. ಹೊಟೇಲಿನ ಲಾಬಿಯಲ್ಲಿ ನಾನು ಕೆಲಸ ಮಾಡಲು ಕೂರುವ ಸ್ಥಳ ಇದೆ, ಅಲ್ಲಿ ಒಂದು ಡೆಸ್ಕ ಇದೆ, ಲಾಬಿಯಲ್ಲಿ ನನ್ನಂದಿಗೆ ಚಾಸಾಃ22, 24 ಮತ್ತು ಚಾಸಾಃ28 ನಿಕಿತಾ, ಚಾಸಾಃ26 ಸಂದೇಶ, ಚಾಸಾಃ27 ಭಕ್ತಿ ಕೆಲಸ ಮಾಡುತ್ತಿದ್ದರು, ಚಾಸಾಃ29 ಕಾಸಿಮಸಾಬ್ ಹಾಗೂ ಚಾಲಕರಾದ ಚಾಸಾಃ23 ಪರಮೇಶ ಲಾಬಿಯ ಹೊರಗಡೆ ಇದ್ದರು, ಘಟನೆ ನಡೆಯುವ ಸಮಯದಲ್ಲಿ ಚಾಸಾಃ22, 24, 28, 26, 27, 29, 23 ಇದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಈ ಬಗ್ಗೆ ಹೇಳಿಕೆಯನ್ನು ನಾನು ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಅವರು ಕೇಳಲಿಲ್ಲ ನಾನು ಹೇಳಲಿಲ್ಲ.

25. ದಿಃ 04.07.2022 ಮತ್ತು ದಿಃ 05-07-2022 ರಂದು 1 ಮತ್ತು 2 ನೇ ಆರೋಪಿತರು ಪ್ರೆಸಿಡೆಂಟ್ ಹೊಟೇಲಿನ ಲಾಬಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾಃ1 ರವರೊಂದಿಗೆ ನಾನು ಒಳ್ಳೆ ಸಂಪರ್ಕದಲ್ಲಿದ್ದೆನು ಎಂದರೆ ಸರಿಯಲ್ಲ. ಚಾಸಾಃ1 ರವರ ಮಾತು ಕೇಳಿಕೊಂಡು ಮತ್ತು ಅವರ ಪ್ರಭಾವಕ್ಕೆ ಒಳಗಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ವಿಷಯಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಗುರುಜಿರವರ ಸಾವಿಗೂ 1 ಮತ್ತು 2 ನೇ ಆರೋಪಿತರಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿಕೊಂಡು ಮು.ಮಾ-20, 21 ನ್ನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ ಆರ್ ಪಿ ವಕೀಲರಿಂದಃ</u>**

26. ನಾನು ಪ್ರೆಸಿಡೆಂಟ್ ಹೊಟೇಲಿನಲ್ಲಿನೌಕರನಾಗಿರಲಿಲ್ಲ ಎಂದರೆ ಸರಿಯಲ್ಲ. ದೂರುದಾರರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 08.07.2022 ರಂದು 1 ಮತ್ತು 2 ನೇ ಆರೋಪಿತರುನ್ನು ಪೋಲಿಸರು ಕರೆದುಕೊಂಡು ಬಂದು ನನಗೆ ತೋರಿಸಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದಂತೆ 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೋದಿಸುವುದಾಗಿ ನುಡಿದಿದ್ದಾರೆ.

ಮರುವಿಚಾರಣೆಃ ಇಲ್ಲ.

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಿದೆ }***

**ಸಾ ಓ ಹೇ ಕೇ ಸರಿ ಇದೆ**

(ಪಲ್ಲವಿ ಬಿ ಆರ್)

**1ನೇ ಅಧಿಕ ಸತ್ರ ನ್ಯಾಯಾಧೀಶರು**
**ಹುಬ್ಬಳ್ಳಿ**